# Lakshmi Shobhane

ಶೋಭಾನವೆನ್ನಿರೆ ಸುರರೊಳು ಸುಭಗನಿಗೆ ।
ಶೋಭಾನವೆನ್ನೀ ಸುಗುಣನಿಗೆ ॥
ಶೋಭಾನವೆನ್ನಿರೆ ತ್ರಿವಿಕ್ರಮರಾಯಗೆ ।
ಶೋಭಾನವೆನ್ನೀ ಸುರಪ್ರಿಯಗೆ ॥ ಶೋಭಾನೆ ॥ ಪ ॥

ಲಕ್ಷ್ಮೀನಾರಾಯಣರ ಚರಣಕ್ಕೆ ಶರಣೆಂಬೆ ।
ಪಕ್ಷಿವಾಹನಗೆರಗುವೆ ॥
ಪಕ್ಷಿವಾಹನಗೆರಗುವೆ ಅನುದಿನ ।
ರಕ್ಷಿಸಲಿ ನಮ್ಮ ವಧೂವರರ ॥ ೧ ॥

ಪಾಲಸಾಗರವನ್ನು ಲೀಲೆಯಲಿ ಕಡೆಯಲು ।
ಬಾಲೆ ಮಹಾಲಕ್ಷ್ಮಿ ಉದಿಸಿದಳು ॥
ಬಾಲೆ ಮಹಾಲಕ್ಷ್ಮಿ ಉದಿಸಿದಾಳಾದೇವಿ ।
ಪಾಲಿಸಲಿ ನಮ್ಮ ವಧೂವರರ ॥ ೨ ॥

ಬೊಮ್ಮನ ಪ್ರಳಯದಲಿ ತನ್ನರಸಿಯೊಡಗೂಡಿ ।
ಸುಮ್ಮನೆಯಾಗಿ ಮಲಗಿಪ್ಪ ॥
ನಮ್ಮ ನಾರಾಯಣಗು ಈ ರಮ್ಮೆ ಗಡಿಗಡಿಗು ।
ಜನ್ಮವೆಂಬುದು ಅವತಾರ ॥ ೩ ॥

ಕಂಬುಕಂಠದ ಸುತ್ತ ಕಟ್ಟಿದ ಮಂಗಳಸೂತ್ರ ।
ಅಂಬುಜವೆರಡು ಕರಯುಗದಿ ॥
ಅಂಬುಜವೆರಡು ಕರಯುಗದಿ ಧರಸಿ ಪೀ ।
ತಾಂಬರವನುಟ್ಟುಮೆರೆದಳೆ ॥ ೪ ॥

ಒಂದು ಕರದಿಂದ ಅಭಯವನೀವಳೆ ಮ ।
ತ್ತೊಂದು ಕೈಯಿಂದ ವರಗಳ ॥
ಕುಂದಿಲ್ಲದಾನಂದ ಸಂದೋಹ ಉಣಿಸುವ ।
ಇಂದಿರೆ ನಮ್ಮ ಸಲಹಲಿ ॥ ೫ ॥

ಪೊಳೆವ ಕಾಂಚಿಯ ದಾಮ ಉಲಿವ ಕಿಂಕಿಣಿಗಳು ।
ನಲಿವ ಕಾಲಂದುಗೆ ಘಲುಕೆನಲು ॥
ನಳನಳಿಸುವ ಮುದ್ದು ಮುಖದ ಚೆಲುವಿಕೆ ಲಕ್ಷ್ಮಿ ।
ಸಲಹಲಿ ನಮ್ಮ ವಧೂವರರ ॥ ೬ ॥

ರನ್ನದ ವೊಲೆಗಟ್ಟು ಚಿನ್ನದಾಭರಣಗಳ ।
ಚೆನ್ನೆ ಮಹಾಲಕ್ಷ್ಮಿ ಧರಿಸಿದಳೆ ॥
ಚೆನ್ನೆ ಮಹಾಲಕ್ಷ್ಮಿ ಧರಿಸಿದಳಾ ದೇವಿ ।
ತನ್ನ ಮನೆಯ ವಧೂವರರ ಸಲಹಲಿ ॥ ೭ ॥

ಕುಂಭಕುಚದ ಮೇಲೆ ಇಂಬಿಟ್ಟ ಹಾರಗಳು ।
ತುಂಬಿ ಗುರುಳ ಮುಖಕಮಲ ॥
ತುಂಬಿ ಗುರುಳ ಮುಖಕಮಲದ ಮಹಾಲಕ್ಷ್ಮಿ ಜಗ ।
ದಂಬೆ ವಧೂವರರ ಸಲಹಲಿ ॥ ೮ ॥

ಮುತ್ತಿನ ಓಲೆಯನ್ನಿಟ್ಟಳೆ ಮಹಾಲಕ್ಷ್ಮಿ ।
ಕಸ್ತೂರಿ ತಿಲಕ ಧರಿಸಿದಳೆ ॥
ಕಸ್ತೂರಿ ತಿಲಕ ಧರಿಸಿದಳಾ ದೇವಿ ಸ ।
ರ್ವತ್ರ ವಧೂವರರ ಸಲಹಲಿ ॥ ೯ ॥

ಅಂಬುಜನಯನಗಳು ಬಿಂಬಾಧರದ ಶಶಿ ।
ಬಿಂಬದಂತೆಸೆವ ಮೂಗುತಿಮಣಿಯ ಶಶಿ ॥
ಬಿಂಬದಂತೆಸೆವ ಮೂಗುತಿಮಣಿಯ ಮಹಲಕ್ಷ್ಮಿ ।
ಉಂಬುದಕೀಯಲಿ ವಧೂವರರ್ಗೆ ॥ ೧೦ ॥

ಮುತ್ತಿನಕ್ಷತೆಯಿಟ್ಟು ನವರತ್ನದ ಮುಕುಟವ ।
ನೆತ್ತಿಯ ಮೇಲೆ ಧರಿಸಿದಳೇ ॥
ನೆತ್ತಿಯ ಮೇಲೆ ಧರಿಸಿದಳಾ ದೇವ ತನ್ನ ।
ಭಕ್ತಿಯ ಜನರ ಸಲಹಲಿ ॥ ೧೧ ॥

ಕುಂದ ಮಂದಾರ ಜಾಜೀ ಕುಸುಮಗಳ ವೃಂದವ ।
ಚೆಂದದ ತುರುಬಿಗೆ ತುರುಬಿದಳೆ ॥
ಕುಂದವರ್ಣದ ಕೋಮಲೆ ಮಹಲಕ್ಷ್ಮಿ ಕೃಪೆ ।
ಯಿಂದ ವಧೂವರರ ಸಲಹಲಿ ॥ ೧೨ ॥

ಎಂದೆಂದಿಗು ಬಾಡದ ಅರವಿಂದದ ಮಾಲೆಯ ।
ಇಂದಿರೆ ಪೊಳೆವ ಕೊರಳಲ್ಲಿ ॥
ಇಂದಿರೆ ಪೊಳೆವ ಕೊರಳಲ್ಲಿ ಧರಿಸಿದಳೆ ಅವ ।
ಳಿಂದು ವಧೂವರರ ಸಲಹಲಿ ॥ ೧೩ ॥

ದೇವಾಂಗ ಪಟ್ಟೆಯ ಮೇಲು ಹೊದ್ದಿಕೆಯ ।
ಭಾಮೆ ಮಹಾಲಕ್ಷ್ಮಿ ಧರಿಸಿದಳೇ ॥
ಭಾಮೆ ಮಹಾಲಕ್ಷ್ಮಿ ಧರಿಸಿದಳಾ ದೇವಿ ತನ್ನ ।
ಸೇವಕ ಜನರ ಸಲಹಲಿ ॥ ೧೪ ॥

ಈ ಲಕ್ಷ್ಮಿ ದೇವಿಯ ಕಾಲುಂಗುರ ಘಲಕೆನಲು ।
ಲೋಲಾಕ್ಷಿ ಮೆಲ್ಲನೆ ನಡೆತಂದಳು ॥
ಸಾಲಾಗಿ ಕುಳ್ಳಿರ್ದ ಸುರರ ಸಭೆಯ ಕಂಡು ।
ಆಲೋಚಿಸಿದಳು ಮನದಲ್ಲಿ ॥ ೧೫ ॥

ತನ್ನ ಮಕ್ಕಳ ಕುಂದ ತಾನೇ ಪೇಳುವುದಕ್ಕೆ ।
ಮನ್ನದಿ ನಾಚಿ ಮಹಲಕ್ಷ್ಮಿ ॥
ತನ್ನಾಮದಿಂದಲಿ ಕರೆಯದೆ ಒಬ್ಬೊಬ್ಬರ ।
ಉನ್ನತ ದೋಷಗಳನೆಣಿಸಿದಳು ॥ ೧೬ ॥

ಕೆಲವರು ತಲೆಯೂರಿ ತಪಗೈಯ್ದು ಪುಣ್ಯವ ।
ಗಳಿಸಿದ್ದರೇನೂ ಫಲವಿಲ್ಲ ॥
ಜ್ವಲಿಸುವ ಕೋಪದಿ ಶಾಪವ ಕೊಡುವರು ।
ಲಲನೆಯನಿವರು ಒಲಿಸುವರೆ ॥ ೧೭ ॥

ಎಲ್ಲ ಶಾಸ್ತ್ರಗಳೋದಿ ದುರ್ಲಭ ಜ್ಞಾನವ ।
ಕಲಿಸಿ ಕೊಡುವ ಗುರುಗಳು ॥
ಬಲ್ಲಿದ ಧನಕ್ಕೆ ಮರುಳಾಗಿವರಿಬ್ಬರು ।
ಸಲ್ಲದ ಪುರೋಹಿತಕ್ಕೊಳಗಾಗರು ॥ ೧೮ ॥

ಕಾಮನಿರ್ಜಿತನೊಬ್ಬ ಕಾಮಿನಿಗೆ ಸೋತೊಬ್ಬ ।
ಭಾಮಿನಿಯ ಹಿಂದೆ ಹಾರಿದವ ॥
ಕಾಮಾಂಧನಾಗಿ ಮುನಿಯ ಕಾಮಿನಿಗೈಯ್ದಿದನೊಬ್ಬ ।
ಕಾಮದಿ ಗುರುತಲ್ಪಗಾಮಿಯೊಬ್ಬ ॥ ೧೯ ॥

ನಶ್ವರೈಶ್ವರ್ಯವ ಬಯಸುವನೊಬ್ಬ ಪರ ।
ರಾಶ್ರಯಿಸಿ ಬಾಳುವ ಈಶ್ವರನೊಬ್ಬ ॥
ಹಾಸ್ಯವ ಮಾಡಿ ಹಲ್ಲ ಉದುರಿಸಿಕೊಂಡವನೊಬ್ಬ ।
ದೃಶ್ಯಾಂಘ್ರಿಯೊಬ್ಬ ಒಕ್ಕಣನೊಬ್ಬ ॥ ೨೦ ॥

ಮಾವನ ಕೊಂದೊಬ್ಬ ಮರುಳಾಗಿಹನು ಗಡ ।
ಹಾರ್ವನ ಕೊಂದೊಬ್ಬ ಬಳಲಿದ ॥
ಜೀವರ ಕೊಂದೊಬ್ಬ ಕುಲಗೇಡೆಂದೆಣಿಸುವ ।
ಶಿವನಿಂದೊಬ್ಬ ಬಯಲಾದ ॥ ೨೧ ॥

ಧರ್ಮವುಂಟೊಬ್ಬನಲಿ ಹೆಮ್ಮೆಯ ಹೆಸರಿಗೆ ।
ಅಮ್ಮಮ್ಮ ತಕ್ಕ ಗುಣವಿಲ್ಲ ॥
ಕ್ಷಮ್ಮೆಯ ಬಿಟ್ಟೊಬ್ಬ ನರಕದಲಿ ಜೀವರ ।
ಮರ್ಮವ ಮೆಟ್ಟಿ ಕೊಲಿಸುವ ॥ ೨೨ ॥

ಖಳನಂತೆ ಒಬ್ಬ ತನಗೆ ಸಲ್ಲದ ಭಾಗ್ಯವ ।
ಬಲ್ಲಿದಗಂಜಿ ಬಯಲಾದ ॥
ದುರ್ಲಭ ಮುಕ್ತಿಗೆ ದೂರವೆಂದೆನಿಸುವ ಪಾ ।
ತಾಳ ತಳಕ್ಕೆ ಇಳಿದ ಗಡ ॥ ೨೩ ॥

ಎಲ್ಲರಾಯುಷ್ಯವ ಶಿಂಶುಮಾರದೇವ ।
ಸಲ್ಲೀಲೆಯಿಂದ ತೊಲಗಿಸುವ ॥
ಒಲ್ಲೆ ನಾನಿವರ ನಿತ್ಯಮುತ್ತೈದೆಯೆಂದು ।
ಬಲ್ಲವರೆನ್ನ ಭಜಿಸುವರು ॥ ೨೪ ॥

ಪ್ರಕೃತಿಯ ಗುಣದಿಂದ ಕಟ್ಟುವಡೆದು ನಾನಾ ।
ವಿಕೃತಿಗೊಳಗಾಗಿ ಭವದಲ್ಲಿ ॥
ಸುಖದು:ಖವುಂಬ ಬೊಮ್ಮಾದಿ ಜೀವರು ।
ದು:ಖಕೆ ದೂರಳೆನಿಪ ಎನಗೆಣೆಯೆ ॥ ೨೫ ॥

ಒಬ್ಬನಾವನ ಮಗ ಮತ್ತೊಬ್ಬನಾವನ ಮೊಮ್ಮಗ ।
ಒಬ್ಬನಾವನಿಗೆ ಶಯನಾದ ॥
ಒಬ್ಬನಾವನ ಪೊರುವ ಮತ್ತಿಬ್ಬರಾವನಿಗಂಜಿ ।
ಅಬ್ಬರದಲಾವಾಗ ಸುಳಿವರು ॥ ೨೬ ॥

ಒಬ್ಬನಾವನ ನಾಮಕಂಜಿ ಬೆಚ್ಚುವ ಗಡ ।
ಸರ್ವರಿಗಾವ ಅಮೃತವ ॥
ಸರ್ವರಿಗಾವ ಅಮೃತವನುಣಿಸುವ ಅವ ।
ನೊಬ್ಬನೆ ನಿರನಿಷ್ಟ ನಿರವದ್ಯ ॥ ೨೭ ॥

ನಿರನಿಷ್ಟ ನಿರವದ್ಯ ಎಂಬ ಶ್ರುತ್ಯರ್ಥವ ।
ಒರೆದು ನೋಡಲು ನರಹರಿಗೆ ॥
ನರಕಯಾತನೆ ಸಲ್ಲ ದುರಿತಾದಿದೂರನಿಗೆ ।
ಮರುಳ ಮನಬಂದಂತೆ ನುಡಿಯದಿರು ॥ ೨೮ ॥

ಒಂದೊಂದು ಗುಣಗಳು ಇದ್ದಾವು ಇವರಲ್ಲಿ ।
ಸಂದಣಿಸಿವೆ ಬಹು ದೋಷ ॥
ಕುಂದೆಳ್ಳಷ್ಟಿಲ್ಲದ ಮುಕುಂದನೆ ತನಗೆಂದು ।
ಇಂದಿರೆ ಪತಿಯ ನೆನೆದಳು ॥ ೨೯ ॥

ದೇವರ್ಷಿ ವಿಪ್ರರ ಕೊಂದು ತನ್ನುದರದೊಳಿಟ್ಟು ।
ತೀವಿದ್ದ ಹರಿಗೆ ದುರಿತವ ॥
ಭಾವಜ್ಞರೆಂಬರೆ ಆಲದೆಲೆಯ ಮೇಲೆ ।
ಶಿವನ ಲಿಂಗವ ನಿಲಿಸುವರೆ ॥ ೩೦ ॥

ಹಸಿವುತೃಷೆ ಜರೆ ಮರಣ ರೋಗರುಜಿನಗಳೆಂಬ ।
ಅಸುರ ಪಿಶಾಚಿಗಳ ಭಯವೆಂಬ ॥
ವ್ಯಸನ ಬರಬಾರದು ಎಂಬ ನಾರಾಯಣನಿಗೆ ।
ಪಶು ಮೊದಲಾಗಿ ನೆನೆಯದು ॥ ೩೧ ॥

ತಾ ದುಃಖಿಯಾದರೆ ಸುರರಾರಾತಿಯ ಕಳೆದು ।
ಮೋದವೀವುದಕ್ಕೆ ಧರೆಗಾಗಿ ॥
ಮಾಧವ ಬಾಹನೆ ಕೆಸರೊಳು ಮುಳುಗಿದ ಪರರ ।
ಬಾಧಿಪ ಕೆಸರ ಬಿಡಿಸುವನೆ ॥ ೩೨ ॥

ಬೊಮ್ಮನಾಲಯದಲ್ಲಿ ಇದ್ದವಗೆ ಲಯವುಂಟೆ ।
ಜನ್ಮಲಯವಿಲ್ಲದವನಿಗೆ ॥
ಅಮ್ಮಿಯನುಣಿಸಿದ್ದ ಯಶೋದೆಯಾಗಿದ್ದಳೆ ।
ಅಮ್ಮ ಇವಗೆ ಹಸಿತೃಷೆಯುಂಟೆ ॥ ೩೩ ॥

ಆಗ ಭಕ್ಷ್ಯ ಭೋಜ್ಯವಿತ್ತು ಪೂಜಿಸುವ ।
ಯೋಗಿಗೆ ಉಂಟೇ ಧನಧಾನ್ಯ ॥
ಆಗ ದೊರಕೊಂಬುದೇ ಪಾಕಮಾಡುವ ವಹ್ನಿ ಮ ।
ತ್ತಾಗಲೆಲ್ಲಿಹುದು ವಿಚಾರಿಸಿರೋ ॥ ೩೪ ॥

ರೋಗವನೀವ ವಾತ ಪಿತ್ತ ಶ್ಲೇಷ್ಮ ।
ಆಗ ಕೂಡುವುದೇ ರಮೆಯೊಡನೆ ॥
ಭೋಗಿಸುವವಗೆ ದುರಿತವ ನೆನೆವರೆ ।
ಈ ಗುಣನಿಧಿಗೆ ಎಣೆಯುಂಟೆ ॥ ೩೫ ॥

ರಮ್ಮೇದೇವಿಯರನಪ್ಪಿಕೊಂಡಿಪ್ಪುದು ।
ರಮ್ಮೆಯರಸಗೆ ರತಿ ಕಾಣಿರೋ ॥
ಅಮ್ಮೋಘವೀರ್ಯವು ಚಲಿಸಿದರೆ ಪ್ರಳಯದಲಿ ।
ಕುಮಾರರ್ ಯಾಕೆ ಜನಿಸರು ॥ ೩೬ ॥

ಏಕತ್ರ ನಿರ್ಣೀತ ಶಾಸ್ತ್ರಾರ್ಥ ಪರತ್ರಾಪಿ ।
ಬೇಕೆಂಬ ನ್ಯಾಯವ ತಿಳಿದುಕೋ ॥
ಶ್ರೀಕೃಷ್ಣನೊಬ್ಬನೆ ಸರ್ವದೋಷಕ್ಕೆ ಸಿ ।
ಲುಕನೆಂಬುದು ಸಲಹಲಿಕೆ ॥ ೩೭ ॥

ಎಲ್ಲ ಜಗವ ನುಂಗಿ ದಕ್ಕಿಸಿಕೊಂಡವಗೆ ।
ಸಲ್ಲದು ರೋಗ ರುಜಿನವು ॥
ಬಲ್ಲ ವೈದ್ಯರ ಕೇಳಿ ಆಜೀರ್ತಿಮೂಲವೆಲ್ಲ ।
ಇಲ್ಲ ಸಮಸ್ತ ರುಜಿನವು ॥ ೩೮ ॥

ಇಂಥಾ ಮೂರುತಿಯ ಒಳಗೊಂಬ ನರಕ ಬಹು ।
ಭ್ರಾಂತ ನೀನೆಲ್ಲಿಂದ ತೋರಿಸುವೆಲೋ ॥
ಸಂತೆಯ ಮರುಳ ಹೋಗೆಲೋ ನಿನ್ನ ಮಾತ ।
ಸಂತರು ಕೇಳಿ ಸೊಗಸರು ॥ ೩೯ ॥

ಶ್ರೀ ನಾರಾಯಣನ ಜನನೀಜನಕರು ।
ನಾನೆಂಬ ವಾದ ನಡಿಯದೋ ॥
ಜಾಣರದರಿಂದರಿಯ ಮೂಲರೂಪವ ತೋರಿ ।
ಶ್ರೀ ನರಸಿಂಹನ ಅವತಾರ ॥ ೪೦ ॥

ಅಂಬುಧಿಯ ಉದಕದಲಿ ಒಡೆದು ಮೂಡಿದ ಕೂರ್ಮ ।
ನೆಂಬ ಶ್ರೀ ಹರಿಯ ಪಿತನಾರು ॥
ಎಂಬ ಶ್ರೀಹರಿಯ ಪಿತನಾರು ಅದರಿಂದ ಸ್ವಾ ।
ಯಂಭುಗಳೆಲ್ಲ ಅವತಾರ ॥ ೪೧ ॥

ದೇವಕಿಯ ಗರ್ಭದಲಿ ದೇವನವತರಿಸಿದ ।
ಭಾವವನ್ನು ಬಲ್ಲ ವಿವೇಕಿಗಳು ॥
ಈ ವಸುಧೆಯೊಳಗೆ ಕೃಷ್ಣಗೆ ಜನ್ಮವ ।
ಆವ ಪರಿಯಲಿ ನುಡಿಯುವೆಯೋ ॥ ೪೨ ॥

ಆಕಳಿಸುವಾಗ ಯಶೋದಾದೇವಿಗೆ ।
ದೇವ ತನ್ನೊಳಗೆ ಹುದುಗಿದ್ದ ॥
ಭುವನವೆಲ್ಲವ ತೋರಿದುದಿಲ್ಲವೆ ।
ಆ ವಿಷ್ಣು ಗರ್ಭದೊಳಡಗುವನೆ ॥ ೪೩ ॥

ಆನೆಯ ಮ್ಯಾನದಲ್ಲಿ ಅಡಗಿಸಿದವರುಂಟೆ ।
ಅನೇಕ ಕೋಟಿ ಅಜಾಂಡವ ॥
ಅಣುರೇಣು ರೂಪದಲಿ ಆಳ್ದ ಶ್ರೀ ಹರಿಯ ।
ಜನನಿ ಜಠರವು ಒಳಗೊಂಬುದೆ ॥ ೪೪ ॥

ಅದರಿಂದ ಕೃಷ್ಣನಿಗೆ ಜನ್ಮವೆಂಬುದು ಸಲ್ಲ ।
ಮದನನಿವನ ಕುಮಾರನು ॥
ಕದನದಿ ಕಣೆಗಳ ಇವನೆದೆಗೆಸೆವನೆ ।
ಸುದತೇರಿಗಿವನೆಂತು ಸಿಲುಕುವನೆ ॥ ೪೫ ॥

ಅದರಿಂದ ಕೃಷ್ಣನಿಗೆ ಪರನಾರೀ ಸಂಗವ ಕೋ ।
ವಿದರಾದ ಬುಧರು ನುಡಿವಾರೆ ॥
ಸದರವೆ ಈ ಮಾತು ಸರ್ವ ವೇದಂಗಳು ।
ಮುದದಿಂದ ತಾವು ಸ್ತುತಿಸುವವು ॥ ೪೬ ॥

ಎಂದ ಭಾಗವತದ ಚೆಂದದ ಮಾತನು ।
ಮಂದಮಾನವ ಮನಸಿಗೆ ॥
ತಂದಕೋ ಜಗಕ್ಕೆ ಕೈವಲ್ಯವೀವ ಮು ।
ಕುಂದಗೆ ಕುಂದು ಕೊರತೆ ಸಲ್ಲದು ॥ ೪೭ ॥

ಹತ್ತು ವರ್ಷದ ಕೆಳಗೆ ಮಕ್ಕಳಾಟಿಕೆಯಲ್ಲಿ ।
ಚಿತ್ತ ಸ್ತ್ರೀಯರಿಗೆ ಎರಗುವದೆ ॥
ಅರ್ತಿಯಿಂದರ್ಚಿಸಿದ ಗೋಕುಲದ ಕನ್ಯೆಯರ ।
ಸತ್ಯ ಸಂಕಲ್ಪ ಬೆರಿತಿದ್ದ ॥ ೪೮ ॥

ಹತ್ತು ಮತ್ತಾರು ಸಾಸಿರ ಸ್ತ್ರೀಯರಲ್ಲಿ ।
ಹತ್ತು ಹತ್ತೆನಿಪ ಕ್ರಮದಿಂದ ॥
ಪುತ್ರರ ವೀರ್ಯದಲ್ಲಿ ಸೃಷ್ಟಿಸಿದವರುಂಟೆ ।
ಅರ್ತಿಯ ಸೃಷ್ಟಿಹರಿಗಿದು ॥ ೪೯ ॥

ರೋಮರೋಮಕೂಪ ಕೋಟಿವೃಕ್ಷಂಗಳ ।
ನಿರ್ಮಿಸಿ ಗೋಪಾಲರ ತೆರಳಿಸಿದ ॥
ನಮ್ಮ ಶ್ರೀಕೃಷ್ಣನು ಮಕ್ಕಳ ಸೃಜಿಸುವ ।
ಮಹಿಮೆ ಬಲ್ಲವರಿಗೆ ಸಲಹಲಿಕೆ ॥ ೫೦ ॥

ಮಣ್ಣನೇಕೆ ಮೆದ್ದೆಯೆಂಬ ಯಶೋದೆಗೆ ।
ಸಣ್ಣ ಬಾಯೊಳಗೆ ಜಗಂಗಳ ॥
ಕಣ್ಣಾರೆ ತೋರಿದ ನಮ್ಮ ಶ್ರೀಕೃಷ್ಣನ ।
ಘನತೆ ಬಲ್ಲವರ ಸಲಹಲಿಕೆ ॥ ೫೧ ॥

ನಾರದ ಸನಕಾದಿ ಮೊದಲಾದ ಯೋಗಿಗಳು ।
ನಾರಿಯರಿಗೆ ಮರುಳಾಹರೆ ॥
ಓರಂತೆ ಶ್ರೀ ಕೃಷ್ಣನಡಿಗಡಿಗೆರಗುವರೆ ।
ಆರಾಧಿಸುತ್ತ ಭಜಿಸುವರೆ ॥ ೫೨ ॥

ಅಂಬುಜಸಂಭವ ತ್ರಿಯಂಬಕ ಮೊದಲಾದ ।
ನಂಬಿದವರಿಗೆ ವರವಿತ್ತ ॥
ಸಂಭ್ರಮದ ಸುರರು ಎಳ್ಳಷ್ಟು ದೋಷ ।
ಇಂಬಿದ್ದರಿವನ ಭಜಿಸುವರೆ ॥ ೫೩ ॥

ಅವನುಂಗುಷ್ಟುವ ತೊಳೆದ ಗಂಗಾದೇವಿ ।
ಪಾವನಳೆನಿಸಿ ಮೆರೆಯಳೇ ॥
ಜೀವನ ಸೇರುವ ಪಾಪವ ಕಳೆವಳು ।
ಈ ವಾಸುದೇವಗೆ ಎಣೆಯುಂಟೆ ॥ ೫೪ ॥

ಕಿಲ್ಬಿಷವಿದ್ದರೆ ಅಗ್ರಪೂಜೆಯನು ।
ಸರ್ವರಾಯರ ಸಭೆಯೊಳಗೆ ॥
ಉಬ್ಬಿದ ಮನದಿಂದ ಧರ್ಮಜ ಮಾಡುವನೆಲೆ ।
ಕೊಬ್ಬದಿರೆಲೋ ಪರವಾದಿ ॥ ೫೫ ॥

ಸಾವಿಲ್ಲದ ಹರಿಗೆ ನರಕಯಾತನೆ ಸಲ್ಲ ।
ಜೀವಂತರಿಗೆ ನರಕದಲಿ ॥
ನೋವನೀವನು ನಿಮ್ಮ ಯಮದೇವನು ।
ನೋವಾ ನೀ ಹರಿಯ ಗುಣವರಿಯೆ ॥ ೫೬ ॥

ನರಕವಾಳುವ ಯಮಧರ್ಮರಾಯ ತನ್ನ ।
ನರಜನ್ಮದೊಳಗೆ ಪೊರಳಿಸಿ ॥
ಮರಳಿ ತನ್ನರಕದಲಿ ಪೊರಳಿಸಿ ಕೊಲುವನು ।
ಕುರು ನಿನ್ನ ಕುಹಕ ಕೊಳದಲ್ಲಿ ॥ ೫೭ ॥

ಬೊಮ್ಮನ ನೂರು ವರ್ಷ ಪರಿಯಂತ ಪ್ರಳಯದಲಿ ।
ಸುಮ್ಮನೆಯಾಗಿ ಮಲಗಿಪ್ಪ ॥
ನಮ್ಮ ನಾರಾಯಣಗೆ ಹಸಿ ತೃಷೆ ಜರಾಮರಣ ದು ।
ಷ್ಕರ್ಮದುಃಖಗಳು ತೊಡಸುವರೆ ॥ ೫೮ ॥

ರಕ್ಕಸರಸ್ತ್ರಗಳಿಂದ ಗಾಯವಡೆಯದ ।
ಅಕ್ಷಯ ಕಾಯದ ಶ್ರೀ ಕೃಷ್ಣ ॥
ತುಚ್ಛ ಯಮಭಟರ ಶಸ್ತ್ರಕಳುಕುವನಲ್ಲ ।
ಹುಚ್ಚ ನೀ ಹರಿಯ ಗುಣವರಿಯೇ ॥ ೫೯ ॥

ಕಿಚ್ಚನುಂಗಿದನು ನಮ್ಮ ಶ್ರೀಕೃಷ್ಣನು ।
ತುಚ್ಛ ನರಕದೊಳು ಅನಲನಿಗೆ ॥
ಬೆಚ್ಚುವನಲ್ಲ ಅದರಿಂದವಗೆ ನರಕ ।
ಮೆಚ್ಚುವರಲ್ಲ ಬುಧರೆಲ್ಲ ॥ ೬೦ ॥

ಮನೆಯಲ್ಲಿ ಕ್ಷಮೆಯ ತಾಳ್ದ ವೀರಭಟ ।
ರಣರಂಗದಲ್ಲಿ ಕ್ಷಮಿಸುವನೆ ॥
ಅಣುವಾಗಿ ನಮ್ಮ ಹಿತಕ್ಕೆ ಮನದೊಳಗಿನ ಕೃಷ್ಣ ।
ಮುನಿವ ಕಾಲಕ್ಕೆ ಮಹತ್ತಾದ ॥ ೬೧ ॥

ತಾಯ ಪೊಟ್ಟೆಯಿಂದ ಮೂಲರೂಪವ ತೋರಿ ।
ಆಯುಧ ಸಹಿತ ಪೊರವಂಟ ॥
ನ್ಯಾಯಕೋವಿದರು ಪುಟ್ಟಿದನೆಂಬರೆ ।
ಬಾಯಿಗೆ ಬಂದಂತೆ ಬೊಗಳದಿರು ॥ ೬೨ ॥

ಉಟ್ಟ ಪೀತಾಂಬರ ತೊಟ್ಟ ಭೂಷಣಂಗಳು ।
ಇಟ್ಟ ನವರತ್ನದ ಕಿರೀಟವು ॥
ಮೆಟ್ಟಿದ ಕುರುಹ ಎದೆಯಲ್ಲಿ ತೋರಿದ ಶ್ರೀ ।
ವಿಟ್ಠಲ ಪುಟ್ಟಿದವನೆನಬಹುದೇ ॥ ೬೩ ॥

ಋಷಭಂಸಮೇಷ ಮಹಿಷ ಮೂಷಕವಾಹನವೇರಿ ಮಾ ।
ನಿಸರಂತೆ ಸುಳಿವ ಸುರರೆಲ್ಲ ॥
ಎಸೆವ ದೇವೇಶಾನರ ಸಾಹಸಕ್ಕೆ ಮಣಿದರು ।
ಕುಸುಮನಾಭನಿಗೆ ಸರಿಯುಂಟೆ ॥ ೬೪ ॥

ಒಂದೊಂದು ಗುಣಗಳು ಇದ್ದಾವು ಇವರಲ್ಲಿ ।
ಸಂದಣಿಸಿವೇಕೋ ಬಹುದೋಷ ॥
ಕುಂದೆಳ್ಳಷ್ಟಿಲ್ಲದ ಮುಕುಂದನೆ ತನಗೆಂದು ।
ಇಂದಿರೆ ಪತಿಯ ನೆನೆದಳು ॥ ೬೫ ॥

ಇಂತು ಚಿಂತಿಸಿ ರಮೆ ಸಂತರಾ ಮನ ಪದವ ।
ಸಂತೋಷ ಮನದಿ ನೆನೆವುತ್ತ ॥
ಸಂತೋಷ ಮನದಿ ನೆನೆವುತ್ತ ತನ್ನ ಶ್ರೀ ।
ಕಾಂತನಿದ್ದೆಡೆಗೆ ನಡೆದಳು ॥ ೬೬ ॥

ಕಂದರ್ಪ ಕೋಟಿಗಳ ಗೆಲುವ ಸೌಂದರ್ಯದ ।
ಚಂದವಾಗಿದ್ದ ಚೆಲುವನ ॥
ಇಂದಿರೆ ಕಂಡು ಇವನೆ ತನಗೆ ಪತಿ ।
ಯೆಂದವನ ಬಳಿಗೆ ನಡೆದಳು ॥ ೬೭ ॥

ಈ ತೆರದ ಸುರರ ಸುತ್ತ ನೋಡುತ್ತ ಲಕ್ಷ್ಮಿ ।
ಚಿತ್ತವ ಕೊಡದೆ ನಸುನಗುತ ॥
ಚಿತ್ತವ ಕೊಡದೆ ನಸುನಗುತ ಬಂದು ಪುರು ।
ಷೋತ್ತಮನ ಕಂಡು ನಮಿಸಿದಳು ॥ ೬೮ ॥

ನಾನಾ ಕುಸುಮಗಳಿಂದ ಮಾಡಿದ ಮಾಲೆಯ ।
ಶ್ರೀನಾರಿ ತನ್ನ ಕರದಲ್ಲಿ ॥
ಪೀನಕಂಧರದ ತ್ರಿವಿಕ್ರಮರಾಯನ ।
ಕೊರಳಿನ ಮೇಲಿಟ್ಟು ನಮಿಸಿದಳು ॥ ೬೯ ॥

ಉಟ್ಟ ಪೊಂಬಟ್ಟೆಯ ತೊಟ್ಟಾಭರಣಂಗಳು ।
ಇಟ್ಟ ನವರತ್ನದ ಮುಕುಟವು ॥
ದುಷ್ಟಮರ್ದನನೆಂಬ ಕಡೆಯ ಪೆಂಡೆಗಳು ।
ಇಟ್ಟಿದ್ದ ಹರಿಗೆ ವಧುವಾದಳು ॥ ೭೦ ॥

ಕೊಂಬು ಚಂಬಕ ಕಹಳೆ ತಾಳ ಮದ್ದಳೆಗಳು ।
ತಂಬಟೆ ಭೇರಿ ಪಟಹಗಳು ॥
ಭೊಂ ಭೊಂ ಎಂಬ ಶಂಖ ಡೊಳ್ಳು ಮೌರಿಗಳು ।
ಅಂಬುಧಿಯ ಮನೆಯಲ್ಲೆಸೆದವು ॥ ೭೧ ॥

ಅರ್ಘ್ಯಪಾದ್ಯಾಚಮನ ಮೊದಲಾದ ಷೋಡಶಾ ।
ನರ್ಘ್ಯ ಪೂಜೆಯಿತ್ತನಳಿಯಗೆ ।
ಒಗ್ಗಿದ ಮನದಿಂದ ಧಾರೆಯೆರೆದನೆ ಸಿಂಧು ।
ಸದ್ಗತಿಯಿತ್ತು ಸಲಹೆಂದ ॥ ೭೨ ॥

ವೇದೋಕ್ತ ಮಂತ್ರ ಪೇಳಿ ವಸಿಷ್ಠ ನಾರದ ಮೊದ ।
ಲಾದ ಮುನೀಂದ್ರರು ಮುದದಿಂದ ॥
ವಧೂವರರ ಮೇಲೆ ಶೋಭನದಕ್ಷತೆಯನು ।
ಮೋದವೀಯುತ್ತ ತಳಿದರು ॥ ೭೩ ॥

ಸಂಭ್ರಮದಿಂದಂಬರದಿ ದುಂದುಭಿ ಮೊಳಗಲು ।
ತುಂಬುರು ನಾರದರು ಸ್ತುತಿಸುತ್ತ ॥
ತುಂಬುರು ನಾರದರು ಸ್ತುತಿಸುತ್ತ ಪಾಡಿದರು ಪೀ ।
ತಾಂಬರಧರನ ಮಹಿಮೆಯ ॥ ೭೪ ॥

ದೇವನಾರಿಯರೆಲ್ಲ ಬಂದೊದಗಿ ಪಾಠಕರು ।
ಓವಿ ಪಾಡುತ್ತ ಕುಣಿದರು ॥
ದೇವತರುವಿನ ಹೂವಿನ ಮಳೆಗಳ ।
ಶ್ರೀವರನ ಮೇಲೆ ಕರೆದರು ॥ ೭೫ ॥

ಮುತ್ತು ರತ್ನಗಳಿಂದ ಕೆತ್ತಿಸಿದ ಹಸೆಯ ನವ ।
ರತ್ನ ಮಂಟಪದಿ ಪಸರಿಸಿ ॥
ನವರತ್ನಮಂಟಪದಿ ಪಸರಿಸಿ ಕೃಷ್ಣನ ।
ಮುತ್ತೈದೆಯರೆಲ್ಲ ಕರೆದರು ॥ ೭೬ ॥

ಶೇಷಶಯನನೆ ಬಾ ದೋಷದೂರನೆ ಬಾ ।
ಭಾಸುರಕಾಯ ಹರಿಯೆ ಬಾ ॥
ಭಾಸುರಕಾಯ ಹರಿಯೆ ಬಾ ಶ್ರೀ ಕೃಷ್ಣ ವಿ ।
ಲಾಸದಿಂದೆಮ್ಮಹಸೆಗೆ ಬಾ ॥ ೭೭ ॥

ಕಂಜಲೋಚನನೆ ಬಾ ಮಂಜುಳ ಮೂರ್ತಿಯೆ ಬಾ ।
ಕುಂಜರ ವರದಾಯಕನೆ ಬಾ ॥
ಕುಂಜರವರದಾಯಕನೆ ಬಾ ಶ್ರೀ ಕೃಷ್ಣ ನಿ ।
ರಂಜನ ನಮ್ಮ ಹಸೆಗೆ ಬಾ ॥ ೭೮ ॥

ಆದಿಕಾಲದಲ್ಲಿ ಆಲದೆಲೆಯ ಮೇಲೆ ।
ಶ್ರೀದೇವಿಯರೊಡನೆ ಪವಡಿಸಿದ ॥
ಶ್ರೀದೇವಿಯರೊಡನೆ ಪವಡಿಸಿದ ಶ್ರೀಕೃಷ್ಣ ।
ಮೋದದಿಂದೊಮ್ಮ ಹಸೆಗೆ ಬಾ ॥ ೭೯ ॥

ಆದಿಕಾರಣನಾಗಿ ಆಗ ಮಲಗಿದ್ದು ।
ಮೋದಜೀವರ ತನ್ನ ಉದರದಲಿ ॥
ಮೋದ ಜೀವರ ತನ್ನುದರದಲಿ ಇಂಬಿಟ್ಟ ಅ ।
ನಾದಿ ಮೂರುತಿಯೆ ಹಸೆಗೆ ಬಾ ॥ ೮೦ ॥

ಚಿನ್ಮಯವೆನಿಪ ನಿಮ್ಮ ಮನೆಗಳಲ್ಲಿ ಜೋ ।
ತಿರ್ಮಯವಾದ ಪದ್ಮದಲ್ಲಿ ॥
ರಮ್ಮೆಯರೊಡಗೂಡಿ ರಮಿಸುವ ಶ್ರೀಕೃಷ್ಣ ।
ನಮ್ಮ ಮನೆಯ ಹಸೆಗೆ ಬಾ ॥ ೮೧ ॥

ನಾನಾವತಾರದಲಿ ನಂಬಿದ ಸುರರಿಗೆ ।
ಆನಂದವೀವ ಕರುಣಿ ಬಾ ॥
ಆನಂದವೀವ ಕರುಣಿ ಬಾ ಶ್ರೀ ಕೃಷ್ಣ ।
ಶ್ರೀನಾರಿಯೊಡನೆ ಹಸೆಗೇಳು ॥ ೮೨ ॥

ಬೊಮ್ಮನಾಲಯದಲ್ಲಿ ರನ್ನದ ಪೀಠದಿ ಕುಳಿತು ।
ಒಮ್ಮನದಿ ನೇಹವ ಮಾಡುವ ॥
ನಿರ್ಮಲ ಪೂಜೆಯ ಕೈಗೊಂಬ ಶ್ರೀಕೃಷ್ಣ ಪ ।
ರಮ ಮೂರುತಿಯೆ ಹಸೆಗೆ ಬಾ ॥ ೮೩ ॥

ಮುಖ್ಯಪ್ರಾಣನ ಮನೆಯಲಿ ಭಾರತೀದೇವಿಯಾಗ ।
ಲಿಕ್ಕಿ ಬಡಿಸಿದ ರಸಾಯನವ ॥
ಸಕ್ಕರೆಗೂಡಿದ ಪಾಯಸ ಸವಿಯುವ ।
ರಕ್ಕಸವೈರಿಯೆ ಹಸೆಗೆ ಬಾ ॥ ೮೪ ॥

ರುದ್ರನ ಮನೆಯಲ್ಲಿ ರುದ್ರಾಣಿದೇವಿಯರು ।
ಭದ್ರಮಂಟಪದಿ ಕುಳ್ಳಿರಿಸಿ ॥
ಸ್ವಾದ್ವನ್ನಂಗಳ ಬಡಿಸಲು ಕೈಗೊಂಡ ।
ಮುದ್ದು ನರಸಿಂಹ ಹಸೆಗೆ ಬಾ ॥ ೮೫ ॥

ಗರುಡನ ಮೇಲೇರಿ ಗಗನ ಮಾರ್ಗದಲ್ಲಿ ।
ತರತರದಿ ಸ್ತುತಿಪ ಸುರಸ್ತ್ರೀಯರ ॥
ಮೆರೆವ ಗಂಧರ್ವರ ಗಾನವ ಸವಿಯುವ ।
ನರಹರಿ ನಮ್ಮ ಹಸೆಗೆ ಬಾ ॥ ೮೬ ॥

ನಿಮ್ಮಣ್ಣನ ಮನೆಯ ಸುಧರ್ಮ ಸಭೆಯಲ್ಲಿ ।
ಉಮೆಯರಸ ನಮಿಸಿದ ॥
ಧರ್ಮರಕ್ಷಕನೆನಿಪ ಕೃಷ್ಣ ಕೃಪೆಯಿಂದ ಪ ।
ರಮ ಮೂರುತಿಯೆ ಹಸೆಗೆ ಬಾ ॥ ೮೭ ॥

ಇಂದ್ರನ ಮನೆಗ್ಹೋಗಿ ಅದಿತಿಗೆ ಕುಂಡಲವಿತ್ತು ।
ಅಂದದ ಪೂಜೆಯ ಕೈಗೊಂಡು ॥
ಅಂದದ ಪೂಜೆಯ ಕೈಗೊಂಡು ಸುರತರುವ ।
ಇಂದಿರೆಗಿತ್ತ ಹರಿಯೆ ಬಾ ॥ ೮೮ ॥

ನಿಮ್ಮ ನೆನೆವ ಮುನಿ ಹೃದಯದಲಿ ನೆಲೆಸಿದ ।
ಧರ್ಮರಕ್ಷಕನೆನಿಸುವ ॥
ಸಮ್ಮತವಾಗಿದ್ದ ಪೂಜೆಯ ಕೈಗೊಂಡ ನಿ ।
ಸ್ಸೀಮ ಮಹಿಮ ಹಸೆಗೆ ಬಾ ॥ ೮೯ ॥

ಮುತ್ತಿನ ಸತ್ತಿಗೆಯ ನವರತ್ನದ ಚಾಮರ ।
ಸುತ್ತ ನಲಿವಪ್ಸರ ಸ್ತ್ರೀಯರ ॥
ನೃತ್ಯವ ನೋಡುತ ಚಿತ್ರ ವಾದ್ಯಂಗಳ ಸಂ ।
ಪತ್ತಿನ ಹರಿಯೆ ಹಸೆಗೆ ಬಾ ॥ ೯೦ ॥

ಎನಲು ನಗುತ ಬಂದು ಹಸೆಯ ಮೇಲೆ ।

ವನಿತೆ ಲಕ್ಷ್ಮಿಯೊಡಗೂಡಿ ॥
ಅನಂತ ವೈಭವದಿ ಕುಳಿತ ಕೃಷ್ಣನ ನಾಲ್ಕು ।
ದಿನದುತ್ಸವವ ನಡೆಸಿದರು ॥ ೯೧ ॥

ಅತ್ತೇರೆನಿಪ ಗಂಗೇ ಯಮುನೇ ಸರಸ್ವತಿ ಭಾ ।
ರತಿ ಮೊದಲಾದ ಸುರಸ್ತ್ರೀಯರು ॥
ಮುತ್ತಿನಕ್ಷತೆಯನ್ನು ಶೋಭಾನವೆನುತಲಿ ತಮ್ಮ ।
ಅರ್ತಿಯಳಿಯಗೆ ತಳಿದರು ॥ ೯೨ ॥

ರತ್ನಾದಾರತಿಗೆ ಸುತ್ತ ಮುತ್ತನೆ ತುಂಬಿ ।
ಮುತ್ತೈದೆಯರೆಲ್ಲ ಧವಳದ ॥
ಮುತ್ತೈದೆಯರೆಲ್ಲ ಧವಳದ ಪದನ ಪಾ ।
ಡುತ್ತಲೆತ್ತಿದರೆ ಸಿರವರಗೆ ॥ ೯೩ ॥

ಬೊಮ್ಮತನ್ನರಸಿ ಕೂಡೆ ಬಂದೆರಗಿದ ।
ಉಮೆಯರಸ ನಮಿಸಿದ ॥
ಅಮರರೆಲ್ಲರು ಬಗೆಬಗೆ ಉಡುಗೊರೆಗಳ ।
ರಮ್ಮೆಯರಸಗೆ ಸಲ್ಲಿಸಿದರು ॥ ೯೪ ॥

ಸತ್ಯಲೋಕದ ಬೊಮ್ಮ ಕೌಸ್ತುಭರತ್ನವನಿತ್ತ ।
ಮುಕ್ತಾಸುರರು ಮುದದಿಂದ ॥
ಮುತ್ತಿನ ಕಂಠೀಸರವ ಮುಖ್ಯಪ್ರಾಣನಿತ್ತ ।
ಮಸ್ತಕದ ಮಣಿಯ ಶಿವನಿತ್ತ ॥ ೯೫ ॥

ತನ್ನರಸಿ ಕೂಡೆ ಸವಿನುಡಿ ನುಡಿವಾಗ ।
ವದನದಲ್ಲಿದ್ದಗ್ನಿ ಕೆಡದಂತೆ ॥
ವಹ್ನಿ ಪ್ರತಿಷ್ಠೆಯ ಮಾಡಿ ಅವನೊಳಗಿದ್ದ ।
ತನ್ನಾಹುತಿ ದಿಬ್ಬಣ ಸುರರಿಗೆ ॥ ೯೬ ॥

ಕೊಬ್ಬಿದ ಖಳರೋಡಿಸಿ ಅಮೃತಾನ್ನ ಊಟಕ್ಕೆ ।
ಉಬ್ಬಿದ ಹರುಷದಿ ಉಣಿಸಲು ॥
ಉಬ್ಬಿದ ಹರುಷದಿ ಉಣಿಸಬೇಕೆಂದು ಸಿಂಧು ।
ಸರ್ವರಿಗೆಡೆಯ ಮಾಡಿಸಿದ ॥ ೯೭ ॥

ಮಾವನ ಮನೆಯಲ್ಲಿ ದೇವರಿಗೌತಣವ ।
ದಾನವರು ಕೆಡಿಸದೆ ಬಿಡರೆಂದು ॥
ದಾನವರು ಕೆಡಿಸದೆ ಬಿಡರೆಂದು ಶ್ರೀ ಕೃಷ್ಣ ।
ದೇವ ಸ್ತ್ರೀವೇಷವ ಧರಿಸಿದ ॥ ೯೮ ॥

ತನ್ನ ಸೌಂದರ್ಯದಿಂದುನ್ನತಮಯವಾದ ಲಾ ।
ವಣ್ಯದಿಂದ ಮೆರೆವ ನಿಜಪತಿಯ ॥
ಹೆಣ್ಣುರೂಪವ ಕಂಡು ಕನ್ಯೆ ಮಹಾಲಕ್ಷುಮಿ ಇವ ।
ಗನ್ಯರೇಕೆಂದು ಬೆರಗಾದಳು ॥ ೯೯ ॥

ಲಾವಣ್ಯಮಯವಾದ ಹರಿಯ ಸ್ತ್ರೀವೇಷಕ್ಕೆ ।
ಭಾವಕಿಯರೆಲ್ಲ ಮರುಳಾಗೆ ॥
ಮಾವರ ಸುಧೆಯ ಕ್ರಮದಿಂದ ಬಡಿಸಿ ತನ್ನ ।
ಸೇವಕ ಸುರರಿಗುಣಿಸಿದ ॥ ೧೦೦ ॥

ನಾಗನ ಮೇಲೆ ತಾ ಮಲಗಿದ್ದಾಗ ।
ಆಗಲೆ ಜಗವ ಜತನದಿ ॥
ಆಗಲೆ ಜಗವ ಜತನದಿ ಧರಿಸೆಂದು ।
ನಾಗಬಲಿಯ ನಡೆಸಿದರು ॥ ೧೦೧ ॥

ಕ್ಷುಧೆಯ ಕಳೆವ ನವರತ್ನದ ಮಾಲೆಯ ।
ಮುದದಿಂದ ವಾರಿಧಿ ವಿಧಿಗಿತ್ತ ॥
ಚದುರ ವರವ ವಾಯುದೇವರಿಗಿತ್ತ ।
ವಿಧುವಿನ ಕಲೆಯ ಶಿವಗಿತ್ತ ॥ ೧೦೨ ॥

ಶಕ್ರ ಮೊದಲಾದ ದಿಕ್ಪಾಲಕರಿಗೆ ।
ಸೊಕ್ಕಿದ ಚೌದಂತ ಗಜಂಗಳ ॥
ಉಕ್ಕಿದ ಮನದಿಂದ ಕೊಟ್ಟ ವರುಣದೇವ ಮದು ।
ಮಕ್ಕಳಾಯುಷ್ಯವ ಬೆಳೆಸೆಂದ ॥ ೧೦೩ ॥

ಮತ್ತೆ ದೇವೇಂದ್ರಗೆ ಪಾರಿಜಾತವನಿತ್ತ ।
ಚಿತ್ತವ ಸೆಳೆವಪ್ಸರಸ್ತ್ರೀಯರ ॥
ಹತ್ತು ಸಾವಿರ ಕೊಟ್ಟ ವರುಣದೇವ ಹರಿ ।
ಭಕ್ತಿಯ ಮನದಲ್ಲಿ ಬೆಳೆಸೆಂದ ॥ ೧೦೪ ॥

ಪೊಳೆವ ನವರತ್ನದ ರಾಶಿಯ ತೆಗೆತೆಗೆದು ।
ಉಳಿದಮರರಿಗೆ ಸಲಿಸಿದ ॥
ಉಳಿದ ಅಮರರಿಗೆ ಸಲಿಸಿದ ಸಮುದ್ರ ।
ಕಳುಹಿಸಿದನವರವರ ಮನೆಗಳಿಗೆ ॥ ೧೦೫ ॥

ಉನ್ನತ ನವರತ್ನವಾದ ಅರಮನೆಯ ।
ಚನ್ನೇಮರಗಳಿಂದ ವಿರಚಿಸಿ ॥
ತನ್ನ ಅಳಿಯನಿಗೆ ಸ್ಥಿರವಾಗಿ ಮಾಡಿಕೊಟ್ಟು ।
ಇನ್ನೊಂದು ಕಡೆಯಡಿ ಇಡದಂತೆ ॥ ೧೦೬ ॥

ಹಯವದನ ತನ್ನ ಪ್ರಿಯಳಾದ ಲಕ್ಷುಮಿಗೆ ।
ಜಯವಿತ್ತ ಕ್ಷೀರಾಂಬುಧಿಯಲ್ಲಿ ॥
ಜಯವಿತ್ತ ಕ್ಷೀರಾಂಬುಧಿಯಲ್ಲಿ ಶ್ರೀಕೃಷ್ಣ ।
ದಯದಿ ನಮ್ಮೆಲ್ಲರ ಸಲಹಲಿ ॥ ೧೦೭ ॥

ಪದವ ಮಾಡಿದ ವಾದಿರಾಜಮುನಿಗೆ ।
ಶ್ರೀಪತಿಯಾದ ಹಯವದನ ॥
ತಾಪವ ಕಳೆದು ತನ್ನ ಶ್ರೀಚರಣದ ಸ ।
ಮೀಪದಲ್ಲಿಟ್ಟು ಸಲಹಲಿ ॥ ೧೦೮ ॥

ಇಂತು ಸ್ವಪ್ನದಲ್ಲಿ ಕೊಂಡಾಡಿಸಿಕೊಂಡ ಲಕ್ಷ್ಮೀ ।
ಕಾಂತನ ಕಂದನೆನಿಸುವ ॥
ಸಂತರ ಮೆಚ್ಚಿನ ವಾದಿರಾಜೇಂದ್ರ ಮುನಿ ।
ಪಂಥದಿ ಪೇಳಿದ ಪದವಿದು ॥ ೧೦೯ ॥

ಶ್ರೀಯರಸ ಹಯವದನಪ್ರಿಯ ವಾದಿರಾಜ ।
ರಾಯ ರಚಿಸಿದ ಪದವಿದು ॥
ಆಯುಷ್ಯ ಭವಿಷ್ಯ ದಿನದಿನಕೆ ಹೆಚ್ಚುವುದು ನಿ ।
ರಾಯಾಸದಿಂದ ಸುಖಿಪರು ॥ ೧೧೦ ॥

ಬೊಮ್ಮಾನ ದಿನದಲ್ಲಿ ಒಮ್ಮೊಮ್ಮೆ ಈ ಮದುವೆ ।
ಕ್ರಮ್ಮದಿ ಮಾಡಿ ವಿನೋದಿಸುವ ॥
ನಮ್ಮ ನಾರಾಯಣಗೂ ಈ ರಮ್ಮೆಗಡಿಗಡಿಗೂ ।
ಅಸುರ ಮೋಹನವೇ ನರನಟನೆ ॥ ೧೧೧ ॥

ಮದುವೆಯ ಮನೆಯಲ್ಲಿ ಈ ಪದವ ಪಾಡಿದರೆ ।
ಮದುಮಕ್ಕಳಿಗೆ ಮುದವಹುದು ॥
ವಧುಗಳಿಗೆ ಓಲೇಭಾಗ್ಯ ದಿನದಿನಕೆ ಹೆಚ್ಚುವುದು ।
ಮದನನಯ್ಯನ ಕೃಪೆಯಿಂದ ಶೋಭಾನೆ ॥ ೧೧೨ ॥

ಶೋಭಾನವೆನ್ನಿರೆ ಸುರರೊಳು ಸುಭಗನಿಗೆ ।
ಶೋಭಾನವೆನ್ನೀ ಸುಗುಣನಿಗೆ ॥
ಶೋಭಾನವೆನ್ನಿರೆ ತ್ರಿವಿಕ್ರಮರಾಯಗೆ ।
ಶೋಭಾನವೆನ್ನೀ ಸುರಪ್ರಿಯಗೆ ॥ ಶೋಭಾನೆ ॥ ೧೧೩ ॥